ಸಾಕ್ಷಿಯನ್ನು ದಿ: 12.09.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಡಿ.ಡಬ್ಲ್ಯೂ-1

**ಪಾಟೀಸವಾಲುಃ- ವಾದಿಗಳ ಪರ ವಕೀಲರಿಂದ ಃ-**

1. ವಾದಿಯರು ವಿಭಾಗ ಕೋರಿ ಈ ದಾವೆ ಸಲ್ಲಿಸಿದ್ದಾರೆ. ವಾದಿಯರು ನಮಗೆ ದೂರದ ಸಂಬಂಧಿಕರಾಗಿರುತ್ತಾರೆ. ಹುಸ್ಕೂರು ಚಿಕ್ಕಣ್ಣಚಾರಿ ಮಗ ಮಹಾಲಿಂಗಾಚಾರಿಯ ಹೆಂಡತಿಯ ಹೆಸರು ಯಶೋಧಮ್ಮ. ಸದರಿ ಯಶೋಧಮ್ಮನನ್ನು ನಿಡಿ.2 ವಂಶವೃಕ್ಷದಲ್ಲಿ ಕಾಣಿಸಿಲ್ಲ ಎಂದರೆ ಸರಿ. ಗುರಪ್ಪಚಾರಿ ಮಗ ಲಿಂಗಣ್ಣಚಾರಿ. ಸದರಿ ಲಿಂಗಣ್ಣಚಾರಿ ಮಗನೇ ರಾಚಪ್ಪಾಜಿ ಎಂದರೆ ಸರಿ. ಸದರಿ ರಾಚಪ್ಪಾಜಿ ಹೆಂಡತಿ ಪ್ರೇಮ 3 ನೇ ಪ್ರತಿವಾದಿ ಎಂದರೆ ಸರಿ. 3 ನೇ ಪ್ರತಿವಾದಿ ಮತ್ತು ಯಶೋಧಮ್ಮನಿಗೆ ನೇರವಾದ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಿಡಿ.2 ನ್ನು ನನ್ನ ತಾಯಿ ಹಾಗೂ ಪೂರ್ವಿಕರನ್ನು ಕೇಳಿಕೊಂಡು ಬರೆಸಿರುತ್ತೇನೆ. ನಿಡಿ.2 ನ್ನು ಬರೆಸುವ ಕುರಿತು ನಾನು ದಾಖಲಾತಿಗಳನ್ನು ನೋಡಿರುತ್ತೇನೆ. ನಿಡಿ.2 ನನು ನಾನು ಸೃಷ್ಠಿ ಮಾಡಿರುತ್ತೇನೆಂದರೆ ಸರಿಯಲ್ಲ. ರಾಚಾಚಾರಿ ಉಃ ರಾಚಟ್ಟಚಾರಿಯ ವಂಶಸ್ಥರು ಎಲ್ಲಿರುತ್ತಾರೆ ಗೊತ್ತಿಲ್ಲ. ಸದರಿ ರಾಚಾಚಾರಿ ವಂಶಸ್ಥರು ಬದುಕಿದ್ದಾರೋ ಇಲ್ಲವೋ ಗೊತ್ತಿಲ್ಲ. ನ್ಯಾಯಾಲಯದ ದಿಕ್ಕು ತಪ್ಪಿಸಲು ಸುಳ್ಳು ವಂಶವೃಕ್ಷ ಸೃಷ್ಠಿ ಮಾಡಿರುತ್ತೇನೆಂದರೆ ಸರಿಯಲ್ಲ. ನಾನು ಪಿಯುಸಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿಯರು ಖಾತೆ ಪ್ರಶ್ನಿಸಿ ನನ್ನ ವಿರುದ್ದ ಮಂಡ್ಯ ಡಿಸಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ವಾದಿಯರು ಇನ್ನೊಂದು ಮೇಲ್ಮನವಿಯನ್ನು ನಮ್ಮ ಗ್ರಾಮದ ಮುಕುಂದರಾವ್ ಮತ್ತು ಇತರರ ವಿರುದ್ದ ಸಲ್ಲಿಸಿರುತ್ತಾರೆಂದರೆ ಸರಿ. ವಾದಿಯರು ಇದೇ ನ್ಯಾಯಾಲಯದಲ್ಲಿ ಇನ್ನೊಂದು ದಾವೆಯನ್ನು ಮುಕುಂದರಾವ್ ವಿರುದ್ದ ಸಲ್ಲಿಸಿರುತ್ತಾರೆಂದರೆ ಸರಿ. ಸದರಿ ದಾವೆಯ ಸಂಖ್ಯೆ 65/2016 ಎಂದರೆ ಗೊತ್ತಿಲ್ಲ. ಮುಕುಂದರಾವ್ ವಿರುದ್ದ ಸಲ್ಲಿಸಿದ ಮೇಲ್ಮನವಿಯಲ್ಲಿ ಸದರಿ ಮುಕುಂದರಾವ್ ರವರು ರಾಚಟ್ಟಚಾರಿಗೆ ಪುಟ್ಟಸ್ವಾಮಚಾರಿ ಮತ್ತು ಚಿಕ್ಕರಾಚಾಚಾರಿ ಎಂಬ ಗಂಡು ಮಕ್ಕಳಿದ್ದರು ಎಂದು ತಿಳಿಸಿದ್ದರು ಎಂದರೆ ಗೊತ್ತಿಲ್ಲ. ನಿಡಿ.2 ರಲ್ಲಿ ರಾಚಟ್ಟಚಾರಿ ಮಗ ಆರ್ ಸಿದ್ದರಾಜು ಉಃ ಪುಟ್ಟಸ್ವಾಮಚಾರಿ ಎಂದು ಸೃಷ್ಠಿ ಮಾಡಿರುತ್ತೇನೆಂದರೆ ಸರಿಯಲ್ಲ. ಪುಟ್ಟಸ್ವಾಮಚಾರಿಗೆ ಆರ್ ಸಿದ್ದಚಾರಿ ಎಂದು ಯಾವತ್ತೂ ಕರೆಯುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ 2 ನೇ ಪ್ರತಿವಾದಿ ಹುಸ್ಕೂರು ಚಿಕ್ಕಣ್ಣಚಾರಿ ಮಗಳೆಂದು ನಮ್ಮ ವಂಶವೃಕ್ಷದಲ್ಲಿ

ತಿಳಿಸಿರುತ್ತೇನೆಂದರೆ ಸರಿಯಲ್ಲ. ನಾನು ಈ ದಾವೆಗೋಸ್ಕರ ನಿಡಿ.2 ನ್ನು ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಞ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ